ದಿಃ 20.09.2023.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 1609/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ದುರುಗಪ್ಪ | | **ಪಿ.ಡಬ್ಲ್ಯೂ** | : 1 |
| ತಂದೆಯ ಹೆಸರು | : ಹುಲಿಯಪ್ಪ | | ಸಿ.ಡಬ್ಲ್ಯೂ | : 1 |
| ವಯಸ್ಸು | : 45 ವರ್ಷ | | ದಿನಾಂಕ | : 20.09.2023 |
| ಉದ್ಯೋಗ | : ಕೂಲಿ ಕೆಲಸ | | | |
| ವಾಸಸ್ಥಳ | : ಹಿರೇಗುಂಟುನೂರು ಗ್ರಾಮ | | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ–**9** ನನ್ನ ತಾಯಿ, ಚಾಸಾ–**20** ನನ್ನ ಸಂಬಂಧಿ, ಚಾಸಾ–**2** ಮತ್ತು **3** ಗೊತ್ತಿಲ್ಲ. ಚಾಸಾ–**10** ರಿಂದ **19, 21** ರಿಂದ **28** ಗೊತ್ತಿಲ್ಲ. ಮೃತ ಧನುಷ್ ನನ್ನ ಮಗ. ನನ್ನ ಮಗ ಸದರಿ ಧನುಷ್ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಆದರೆ ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಫಿರ್ಯಾಧಿಯಾಗಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**1** ಎಂದು ಸಾಕ್ಷಿಯ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**2** ಎಂದು ಸಾಕ್ಷಿಯ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಎರಡು ಪೋಟೋಗಳನ್ನು ತೋರಿಸಿದ್ದು, ಸದರಿ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೋಟೋಗಳು ನಿಪಿ–**3** ಮತ್ತು ನಿಪಿ–**4** ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೊಲೀಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಿಃ 20.09.2023.

ಈ ಹಂತದಲ್ಲಿ ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ವಾಹನ ಪರಿಶೀಲನಾ ಪಂಚನಾಮೆಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**5** ಎಂದು ಸಾಕ್ಷಿಯ ಸಹಿಯನ್ನು ನಿಪಿ–**5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಎರಡು ಪೋಟೋಗಳನ್ನು ತೋರಿಸಿದ್ದು, ಸದರಿ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೋಟೋಗಳು ನಿಪಿ–**6** ಮತ್ತು ನಿಪಿ–**7** ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೊಲೀಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸದರಿ ನಿಪಿ–**2** ಮತ್ತು **5** ಕ್ಕೆ ಈಗ್ಗೆ ಸುಮಾರು ಒಂದು ವರ್ಷದ ಹಿಂದೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ. ನಿಪಿ–**2** ಕ್ಕೆ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತು ಮಾಡಿಕೊಂಡಿರುವುದಿಲ್ಲ. ನಿಪಿ–**2** ಮತ್ತು **5** ಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–**2** ಮತ್ತು **5** ರಲ್ಲಿ ಏನೇನೂ ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ11.04.2022 ರಂದು ಸಂಜೆ 05.15 ಗಂಟೆ ಸಮಯದಲ್ಲಿ ನಾನು ಸಾಸಲು ಗ್ರಾಮದಲ್ಲಿದ್ದಾಗ ನನ್ನ ತಾಯಿ ಚಾಸಾ–9 ರವರು ನನಗೆ ಫೋನ್ ಮಾಡಿ ಚಾಸಾ–9 ಮತ್ತು ನನ್ನ ಮಗ ಧನುಷ್ ರವರು ಉಚ್ಚಂಗಿ ದುರ್ಗಕ್ಕೆ ಹೋಗಲು ಭೀಮಸಮುದ್ರ ಗ್ರಾಮದಿಂದ ಟ್ರಾಕ್ಟರ್

ದಿಃ 20.09.2023.

ನಲ್ಲಿ ಹೊರಟು ಹಿರೇಕಂದವಾಡಿ ಗ್ರಾಮದ ಮಾರ್ಗವಾಗಿ ಹೋಗುತ್ತಿರುವಾಗ ಹಿರೇಕಂದವಾಡಿ ಗ್ರಾಮದಿಂದ ಮುಂದೆ ಸಂಜೆ 05.00 ಗಂಟೆ ಸಮಯದಲ್ಲಿ ಟ್ರಾಕ್ಟರ್ ನ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆ ತಿರುವಿನಿಂದ ಮುಂದೆ ಸದರಿ ಟ್ರಾಕ್ಟರ್ ನ್ನು ಪಲ್ಟಿ ಹೊಡೆಸಿದ್ದರಿಂದ ಸದರಿ ಟ್ರಾಕ್ಟರ್ ನಲ್ಲಿದ್ದ ಎಲ್ಲರಿಗೂ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ವಿಷಯ ತಿಳಿದ ನಂತರ ಸದರಿ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಸದರಿ ಸ್ಥಳಕ್ಕೆ ಹೋದಾಗ ಚಾಸಾ–9 ರವರಿಗೆ ಮತ್ತು ನನ್ನ ಮಗ ಧನುಷ್ ನಿಗೆ ತಲೆಗೆ ಮೈಕೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ ಹಾಗೂ ಟ್ರಾಕ್ಟರ್ ನಲ್ಲಿದ್ದ ಇತರರಿಗೂ ಪೆಟ್ಟು ಬಿದ್ದು ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಮಹೀಂದ್ರಾ ಕಂಪನಿಯ ಟ್ರಾಕ್ಟರ್ ಆಗಿತ್ತು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಗೆ ನೊಂದಣಿ ಸಂಖ್ಯೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ನ ಎಂಜಿನ್ ನಂ.ಎನ್ ಎಂ.ಸಿ5 ಎನ್ ಎಫ್ 0049 ಮತ್ತು ಛಾರ್ಸಿ ನಂ.ಎಂಬಿಎನ್ ಜಿ ಎಎ ಇಡಿಎ ಎಂಎನ್ ಸಿ 00808 ಮತ್ತು ಅದರ ಟ್ರೇಲರ್ ನಂ.ಕೆಎ–16–ಟಿ–4197 ಆಗಿತ್ತು ಎಂದರೆ ಸರಿಯಲ್ಲ. ನಂತರ ಸದರಿ ಟ್ರಾಕ್ಟರ್ ನ ಚಾಲಕನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಆತನ ಹೆಸರು ಪ್ರದೀಪ್ ತಂದೆ ರಾಜಪ್ಪ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಂತರ ಸದರಿ ಅಪಘಾತದಲ್ಲಿ ಗಾಯಗೊಂಡವರನ್ನು ನಾನು ಮತ್ತು ಇತರರು ಯಾವುದೋ ಒಂದು ವಾಹನದಲ್ಲಿ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗ ಧನುಷ್ ನನ್ನು ಪರೀಕ್ಷಿಸಿದ ವೈದ್ಯರು ಸದರಿ ನನ್ನ ಮಗ ಧನುಷ್ ಮೃತಪಟ್ಟಿರುವುದಾಗಿ ತಿಳಿಸಿದರು ಎಂದರೆ ಸರಿ. ಸದರಿ ಅಪಘಾತ ಸದರಿ ಟ್ರಾಕ್ಟರ್ ನ ಚಾಲಕನಾದ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ದಿಃ11.04.2022 ರಂದು ಸಂಜೆ 06.30 ಗಂಟೆ ಸಮಯದಲ್ಲಿ ನಾನು ಠಾಣೆಗೆ ಹಾಜರಾಗಿ ನಿಪಿ–1 ರಂತೆ ಆರೋಪಿಯ ವಿರುದ್ದ ಲಿಖಿತ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿಃ 12.04.2022 ರಂದು ಪೊಲೀಸರು ಮಹಜರ್ ಗೆ ಬಂದಾಗ ಅಪಘಾತದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತೋರಿಸಿದ ಸ್ಥಳದಲ್ಲಿ ಚಾಸಾ–2 ಮತ್ತು 3 ರವರ ಸಮಕ್ಷಮ ಅದೇ ದಿನ ಬೆಳಿಗ್ಗೆ 10.00 ರಿಂದ 11.00 ಗಂಟೆವರೆಗೆ ನಿಪಿ–2 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿ–2 ರ ಕಾಲಕ್ಕೆ

ದಿಃ 20.09.2023.

ನಿಪಿ–3 ಮತ್ತು 4 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ12.04.2022 ರಂದು ಬೆಳಿಗ್ಗೆ 11.30 ರಲ್ಲಿ ನನ್ನನ್ನು ಮತ್ತು ಚಾಸಾ–2 ಮತ್ತು 3 ರವರನ್ನು ಚಿಕ್ಕಜಾಜೂರು ಪೊಲೀಸ್ ಠಾಣಾ ಆವರಣಕ್ಕೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಅಪಘಾತ ಪಡಿಸಿದ ಟ್ರಾಕ್ಟರ್ ಅನ್ನು ಹಾಜರುಪಡಿಸಿದ ಮೇರೆಗೆ ಸದರಿ ಟ್ರಾಕ್ಟರ್ ಅನ್ನು ಚಾಸಾ–2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಮೇರೆಗೆ ಸದರಿ ಟ್ರಾಕ್ಟರ್ ಅನ್ನು ನಿಪಿ:5 ರಂತೆ ವಾಹನ ಪರಿಶೀಲನಾ ಪಂಚನಾಮೆಯನ್ನು ಅದೇ ದಿನ ಬೆಳಿಗ್ಗೆ 11.30 ರಿಂದ 12.15 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿ:5 ರ ಕಾಲಕ್ಕೆ ನಿಪಿ: 6 ಮತ್ತು 7 ರಂತೆ ಸದರಿ ಪೊಲಿಸರು ಸದರಿ ಅಪಘಾತ ಪಡಿಸಿದ ಟ್ರಾಕ್ಟರ್ ನ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–2 ಮತ್ತು 5 ರಲ್ಲಿರುವ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನನ್ನು ಚಾಸಾ–35 ರವರ ಕಛೇರಿಗೆ ಕರೆಯಿಸಿ ಸದರಿ ಅಪಘಾತ ಪಡಿಸಿದ ಟ್ರಾಕ್ಟರ್ ಮತ್ತು ಟ್ರೇಲರ್ ನ ಚಾಲಕನನ್ನು ಗುರುತಿಸಿದ ಬಗ್ಗೆ ದಿಃ20.05.2022 ರಂದು ನಿಪಿ–8 ರಂತೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು: ಇಲ್ಲಃ**

**ಮರು ವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.